ಕೂಡ ಮೊದಲ ಆವಶ್ಯಕತೆ ಏನೆಂದರೆ ಧಾರ್ಮಿಕ ಏಕತೆಯೇ! ಆದ್ದರಿಂದ, ನಮ್ಮ ದೇಶಕ್ಕೆ ಪ್ರಾಣಶಕ್ತಿಯನ್ನು ನೀಡುವ ನಮ್ಮ ಧರ್ಮದ ಸರ್ವಸಾಮಾನ್ಯ ತತ್ತ್ವಗಳನ್ನು ನಾವು ಎಲ್ಲರಿಗೂ ಪ್ರಚಾರ ಮಾಡಬೇಕು. ಈ ದೇಶದಲ್ಲಿರುವ ಸ್ತ್ರೀ, ಪುರುಷ, ಮಕ್ಕಳೆಲ್ಲರೂ ಇದನ್ನು ತಿಳಿದುಕೊಳ್ಳಬೇಕು, ಅವನ್ನು ತಮ್ಮ ನಿತ್ಯಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಇದೇ ನಮ್ಮ ಪ್ರಥಮ ಕರ್ತವ್ಯ ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ.

ಸ್ವಾಮೀಜಿಯವರ ಪ್ರಕಾರ ಭಾರತೀಯನಿಗೆ ಮೊದಲು ಧರ್ಮ, ಅನಂತರ ಇತರ ಹವ್ಯಾಸಗಳು. ಮೊದಲು ಇದನ್ನು ನಾವು ಬಲಪಡಿಸಬೇಕು. ನಮ್ಮ ಶಾಸ್ತ್ರಗಳಲ್ಲಿ ಹುದುಗಿರುವ, ಮಠ ಮತ್ತು ಅರಣ್ಯಗಳಲ್ಲಿ ಅಡಗಿರುವ, ಕೆಲವೇ ಕೆಲವು ವ್ಯಕ್ತಿಗಳ ಸ್ವತ್ತಾಗಿರುವ ಆಧ್ಯಾತ್ಮಿಕ ರತ್ನಗಳನ್ನು ನಾವು ಬಯಲಿಗೆ ತರಬೇಕು. ಆ ಭಾವನೆಗಳು ಸಂಸ್ಕೃತಭಾಷೆಯಲ್ಲಿವೆ. ಅದು ಜನಸಾಮಾನ್ಯರಿಗೆ ಅರ್ಥಮಾಡಿಕೊಳ್ಳಲು ಕಷ್ಟವಾದ ಭಾಷೆ. ಹೀಗಾಗಿ ಈ ಅಮೂಲ್ಯ ಭಾವನೆಗಳನ್ನು ದೇಶಭಾಷೆಗಳ ಮೂಲಕ ಜನರಿಗೆ ಪ್ರಚಾರ ಮಾಡಬೇಕು. ಜೊತೆಗೆ ಸಂಸ್ಕೃತ ವಿದ್ಯಾಭ್ಯಾಸವೂ ನಡೆಯಬೇಕು. ಏಕೆಂದರೆ ಸ್ವಾಮೀಜಿಯವರ ಅಭಿಪ್ರಾಯದಂತೆ, ಸಂಸ್ಕೃತ ಕಲಿಕೆಯು ಜನರಿಗೆ ಗೌರವ, ಶಕ್ತಿ, ತೇಜಸ್ಸು – ಇವನ್ನು ನೀಡುವುದು.

ಸ್ವಾಮೀಜಿ ಈ ಸಂದರ್ಭದಲ್ಲಿ, ಒಂದು ನಾಗರಿಕತೆಯಲ್ಲಿರುವ ಸಂಸ್ಕೃತಿ ಮಾತ್ರವೇ, ಆ ಜನಾಂಗವು ಎದುರಿಸಲಿರುವ ಆಘಾತವನ್ನು ಎದುರಿಸಬಲ್ಲುದು; ಕೇವಲ ಜ್ಞಾನರಾಶಿಗೆ ಇಂಥ ಆಘಾತವನ್ನು ಎದುರಿಸುವ ಶಕ್ತಿ ಇಲ್ಲ ಎಂದು ಅಭಿಪ್ರಾಯಪಡುತ್ತಾರೆ. ಹೀಗಾಗಿ ಸಮಾಜದ ಎಲ್ಲ ವರ್ಗದವರನ್ನೂ ಸುಸಂಸ್ಕೃತಗೊಳಿಸುವ ಆವಶ್ಯಕತೆಯನ್ನು ಅವರು ಒತ್ತಿಹೇಳುತ್ತಾರೆ. ಹಾಗೆಯೇ ಪಾಶ್ಚಾತ್ಯರು ಮುಂದಿಡುವ ಆರ್ಯ–ದ್ರಾವಿಡ ಸಿದ್ಧಾಂತವನ್ನು ಸ್ವಾಮೀಜಿ ಸಂಪೂರ್ಣವಾಗಿ ತಿರಸ್ಕರಿಸುತ್ತಾರೆ. ಅದಕ್ಕೆ ಯಾವ ಆಧಾರವೂ ಇಲ್ಲ ಎಂದು ಹೇಳುತ್ತಾರೆ. ನಂತರ ಭಾರತದಲ್ಲಿರುವ ವರ್ಣಸಮಸ್ಯೆಯನ್ನು ಸ್ವಾಮೀಜಿ ತೆಗೆದುಕೊಳ್ಳುತ್ತಾರೆ. ಮೇಲಿನ ವರ್ಗದವರನ್ನು ಕೆಳಗೆ ಎಳೆಯುವುದಲ್ಲ, ಅದಕ್ಕೆ ಬದಲಾಗಿ ಕೆಳವರ್ಗದವರನ್ನು ಮೇಲಕ್ಕೆ ತರುವುದೇ ಇದಕ್ಕೆ ಪರಿಹಾರ ಎಂದು ಸ್ವಾಮೀಜಿ ಸೂಚಿಸುತ್ತಾರೆ. ನಮ್ಮ ಶಾಸ್ತ್ರಗಳಲ್ಲಿ ಸೂಚಿಸಿರುವುದೆಲ್ಲ ಇದೇ ಮಾರ್ಗ ಎಂದು ಅವರು ಹೇಳುತ್ತಾರೆ.

ಹಾಗೆಂದೇ ಸ್ವಾಮೀಜಿ ಎಲ್ಲರಿಗೂ ಕರೆಕೊಡುತ್ತಾರೆ, "ನೀವೆಲ್ಲಾ ಋಷಿಮುನಿಗಳಾಗಿ. ಇಲ್ಲೇ ಗೂಢರಹಸ್ಯವಿರುವುದು" ಎಂದು. ಹಾಗೆಯೇ ಮೇಲ್ವರ್ಗದವರಿಗೆ, ಪ್ರತ್ಯೇಕ ಹಕ್ಕುಬಾಧ್ಯತೆಗಳ ಕಾಲ ಆಗಿಹೋಯಿತು ಎಂದು ಸ್ವಾಮೀಜಿ ಎಚ್ಚರಿಕೆ ನೀಡುತ್ತಾರೆ. "ಶತಶತಮಾನಗಳಿಂದ ಸಂಗ್ರಹಿಸಿದ ನಿಮ್ಮ ಸಂಸ್ಕೃತಿಯನ್ನು ಎಲ್ಲರಿಗೂ ಕೊಟ್ಟು ಅವರನ್ನು ಮೇಲೆತ್ತಲು ಶ್ರಮಪಡಬೇಕು" ಎಂದು ಅವರು ಬ್ರಾಹ್ಮಣರಿಗೆ ಬಿನ್ನವಿಸಿಕೊಳ್ಳುತ್ತಾರೆ. ಹೀಗೆ ಎಲ್ಲ ವರ್ಗದ ಜನ ಸಾಮರಸ್ಯಭಾವನೆಯಿಂದ ಬಾಳುವೆ ಮಾಡಬೇಕು ಎನ್ನುವುದು ಸ್ವಾಮಿ ವಿವೇಕಾನಂದರ ಕನಸಾಗಿತ್ತು. ಎಲ್ಲ ವರ್ಗದವರ ಇಚ್ಛಾಶಕ್ತಿಯನ್ನು ಸಂಗ್ರಹಿಸಿ, ಅದನ್ನು ಏಕೀಭೂತ ಮಾಡಿ, ನೂರಾರು ಕಡೆ ಹರಿಯುತ್ತಿರುವುದನ್ನು ಏಕಮುಖವನ್ನಾಗಿ ಮಾಡುವುದರಲ್ಲಿಯೇ ಭರತಖಂಡದ ಭವಿಷ್ಯ ನಿಂತಿದೆ. ಈ ಐಕ್ಯಭಾವವನ್ನು ಸಾರಿ ಹೇಳುವ ವೈದಿಕ ಮಂತ್ರವೊಂದನ್ನು ಸ್ವಾಮೀಜಿ ಇಲ್ಲಿ ಉದಹರಿಸುತ್ತಾರೆ: **ಸಂಗಚ್ಛಧ್ವಂ ಸಂವದಧ್ವಂ ಸಂ ವೋ ಮನಾಂಸಿ ಜಾನತಾಮ್ । ದೇವಾ ಭಾಗಂ ಯಥಾ ಪೂರ್ವೇ** – " ನೀವೆಲ್ಲ ಒಂದೇ ಮನಸ್ಸಿನವರಾಗಿ. ಒಂದು ಭಾವನೆಯವರಾಗಿ. ಪ್ರಾಚೀನಕಾಲದಲ್ಲಿ ಎಲ್ಲರೂ ಒಮ್ಮತದವರಾಗಿದ್ದರಿಂದಲೇ ದೇವತೆಗಳಿಗೆ ಬಲಿಯನ್ನು ಸ್ವೀಕರಿಸಲು ಸಾಧ್ಯವಾಯಿತು."

ರಾಷ್ಟ್ರವೇ ನಾವು ಆರಾಧಿಸುವ ದೈವವಾಗಬೇಕು ಎಂದು ಸ್ವಾಮೀಜಿ ಸ್ಪಷ್ಟಶಬ್ದಗಳಲ್ಲಿ ಹೀಗೆ ಕರೆನೀಡುತ್ತಾರೆ: "ಜಾಗೃತನಾಗಿರುವ ದೇವರು ಇದೊಂದೇ. ಇದೇ ನಮ್ಮ ಜನಾಂಗ. ಎಲ್ಲೆಲ್ಲೂ ಅವನ ಕಾಲುಗಳೇ. ಎಲ್ಲೆಲ್ಲೂ ಅವನ ಕೈಗಳೇ. ಎಲ್ಲೆಲ್ಲೂ ಅವನ ಕಿವಿಗಳೇ. ಅವನೇ ಸರ್ವವ್ಯಾಪಿಯಾಗಿರುವನು. ಇತರ ದೇವತೆಗಳೆಲ್ಲ ನಿದ್ರಿಸುತ್ತಿರುವರು. ನಮ್ಮ ಸುತ್ತಲೂ ಇರುವ ವಿರಾಟ್ ಮಹೇಶ್ವರನ ಆರಾಧನೆಯನ್ನು ತೊರೆದು, ಕೆಲಸಕ್ಕೆ ಬಾರದ ಇತರ ದೇವರನ್ನು ಏಕೆ ಅರಸಿಕೊಂಡು ಹೋಗಬೇಕು? ನಾವು ಇದನ್ನು ಆರಾಧಿಸಿದರೆ ಇತರ ದೇವತೆಗಳನ್ನು ಆರಾಧಿಸಿದಂತೆಯೇ."

ಮುಕ್ತಿಲಾಭಕ್ಕೆ ಮೊದಲು ಬೇಕಾದದ್ದು ಚಿತ್ತಶುದ್ಧಿ. ಅದಕ್ಕೆ ಮೊದಲು ಮಾಡಬೇಕಾದ ಪೂಜೆಯೇ ವಿರಾಟ್ ಪುರುಷನ ಪೂಜೆ. ಇದನ್ನು ಹೇಗೆ ಮಾಡುವುದು ಎಂದು ಸ್ವಾಮೀಜಿ ಹೇಳಿಕೊಡುತ್ತಾರೆ: "ಮನುಷ್ಯರು ಪ್ರಾಣಿಗಳು – ಇವರೆಲ್ಲ ನಮ್ಮ ದೇವರು. ನಾವು ಮೊದಲು ಪೂಜಿಸಬೇಕಾದ ದೇವರೇ ನಮ್ಮ ದೇಶಬಾಂಧವರು. ಅವರನ್ನು ನಾವು ಪೂಜಿಸಬೇಕು. ನಮ್ಮನಮ್ಮಲ್ಲಿ ಜಗಳ ಕಾಯುವುದು, ಪರಸ್ಪರ ಅಸೂಯೆಪಡುವುದನ್ನು ಬಿಡಬೇಕು."

ರಾಷ್ಟ್ರೀಯ ಪುನರುಜ್ಜೀವನ ಕಾರ್ಯದ ಎರಡು ಹಂತಗಳನ್ನು ಸ್ವಾಮೀಜಿ ನಮಗೆ ಹೀಗೆ ಪರಿಚಯಿಸುವರು: **೧. ಸಮರ್ಪಕ ಶಿಕ್ಷಣ:** ನಮ್ಮ ಆದರ್ಶವೇನೆಂದರೆ, ಪಾರಮಾರ್ಥಿಕ ಮತ್ತು ಲೌಕಿಕ ಶಿಕ್ಷಣಗಳೆರಡೂ ನಮ್ಮ ಅಧೀನದಲ್ಲಿರಬೇಕು. ಸಾಧ್ಯವಾದ ಮಟ್ಟಿಗೆ ಅವು ರಾಷ್ಟ್ರೀಯವಾಗಿರಬೇಕು, ರಾಷ್ಟ್ರೀಯ ಪದ್ಧತಿಯಲ್ಲಿರಬೇಕು. **೨. ಧರ್ಮ ಪ್ರಚಾರವನ್ನು ಮಾಡುವ ಸಂಸ್ಥೆ :** ಈ ಬಗೆಯ ಸಂಸ್ಥೆಯ ಮೂಲಕ ಲೌಕಿಕ ಮತ್ತು ಪಾರಮಾರ್ಥಿಕ – ಎರಡೂ ಬಗೆಯ ವಿಷಯಗಳನ್ನು ಮನೆಯಿಂದ ಮನೆಗೆ ಪ್ರಚಾರ ಮಾಡಬೇಕು. ದೇಶವಿದೇಶಗಳಲ್ಲಿ ಸರ್ವಧರ್ಮಸಾಮರಸ್ಯದ ದೇವಾಲಯಗಳನ್ನು ನಿರ್ಮಿಸಿ, ಆ ಮೂಲಕ ಈ ಬೋಧನಾಕಾರ್ಯ ನಡೆಯಬೇಕು. ಅಂತಹ ಬೋಧಕರಿಗೆ ನಾವು ತರಬೇತಿ ನೀಡಬೇಕು.

ಈ ಪ್ರವಚನದ ಕಡೆಯಲ್ಲಿ ಮೇಲಿನ ಈ ಮಹಾಕಾರ್ಯಕ್ಕೆ ಬೇಕಾದ ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಬೇಕೆಂದು ಸ್ವಾಮೀಜಿ ಕರೆನೀಡುತ್ತಾರೆ. ಅದಕ್ಕಾಗಿ ತ್ಯಾಗ–ಸೇವೆಗಳ ವ್ರತವನ್ನು ಕೈಗೊಳ್ಳುವಂತೆ ನಾಡಿನ ಯುವಕರಿಗೆ ಆಹ್ವಾನವೀಯುತ್ತಾರೆ. ಅವರು ಯುವಕರಿಗೆ ಹೀಗೆ ಹೇಳುತ್ತಾರೆ: **"ಬಾಳು ಕ್ಷಣಿಕ, ಆತ್ಮ ಅಮರ, ಅನಂತ. ಮೃತ್ಯು ಎನ್ನುವುದೊಂದು ಸತ್ಯವಾಗಿರುವಾಗ ಒಂದು ಮಹಾನ್ ಆದರ್ಶವನ್ನು ಸ್ವೀಕರಿಸಿ, ಅದಕ್ಕೆ ನಮ್ಮ ಇಡೀ ಬಾಳನ್ನು ಧಾರೆ ಎರೆಯೋಣ. ಇದೇ ನಮ್ಮ ಶಪಥವಾಗಲಿ."**